# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1597/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:12.7.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:-** ದೇವನಹಳ್ಳಿ ತಾಲ್ಲೂಕು ಇರಿಗೇನಹಳ್ಳಿ ಗ್ರಾಮದ ಸರ್ವೆ ನಂ.33ರಲ್ಲಿ ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಇರಿಗೇನಹಳ್ಳಿ ಗ್ರಾಮದ ಶ್ರೀ ಲೋಕನಾಥ್‌ರವರು ಸರ್ಕಾರಿ ಗೋಮಾಳ ಜಮೀನನ್ನು ತಮ್ಮ ಜಮೀನಿನೊಂದಿಗೆ ಸೇರಿಸಿ ಅಕ್ರಮವಾಗಿ ಜಂಟಿ ಕರಾರು ಮಾಡಿಕೊಂಡು, ಸರ್ಕಾರಿ ಜಮೀನನ್ನು ಕಬಳಿಸಲು ಪ್ರಯತ್ನಿಸಿರುವುದರಿಂದ, ಇವರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಮನೋಜ್.ಬಿ.ಜಿ. ವಕೀಲರು, ಗಾಂಧಿನಗರ, ಬೆಂಗಳೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ವೇಣುಗೋಪಾಲ್, ಗ್ರಾಮಲೆಕ್ಕಿಗರು, ಇರಿಗೇನಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕು,(2) ಶ್ರೀ ಬಿ. ವೇಣುಗೋಪಾಲ್, ರಾಜಸ್ವ ನಿರೀಕ್ಷಕರು, ಚನ್ನರಾಯಪಟ್ಟಣ ಹೋಬಳಿ, (3) ಶ್ರೀ ಎನ್.ಎಂ.ಮುತ್ತುಗಪ್ಪ, ಉಪ ತಹಶೀಲ್ದಾರ್, ನಾಡಕಛೇರಿ, ಚನ್ನರಾಯಪಟ್ಟಣ, ಮತ್ತು (4) ಶ್ರೀ ಕೇಶವಮೂರ್ತಿ, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಇರಿಗೇನಹಳ್ಳಿ ಗ್ರಾಮದ ಸರ್ವೆ ನಂ.33 ಸರ್ಕಾರಿ ಗೋಮಾಳ ಜಮೀನಾಗಿದ್ದು, ಇದನ್ನು ಲೋಕನಾಥನ್ ತಂದೆ ಗಣೇಶ್‌ದಾಸ್‌ರವರು

ತನ್ನ ಸ್ವಂತ ಜಮೀನಿನೊಂದಿಗೆ ಸೇರಿಸಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಇವರು ಸರ್ವೆ ನಂ.33ರಲ್ಲಿ ಒಟ್ಟು 6.26 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ಒತ್ತುವರಿ ಮಾಡಿಕೊಂಡು ಡೆವಲಪರ್‌ಗಳ ಜೊತೆ ಜಂಟಿ ಒಪ್ಪಂದ ಸಹ ಮಾಡಿಕೊಂಡಿರುತ್ತಾರೆ. ಎದುರುದಾರರು ಈ ಬಗ್ಗೆ ಯಾವುದೇ ಕ್ರಮಕೈಗೊಳ್ಳದೇ ಕರ್ತವ್ಯಲೋಪವೆಸಗಿರುವುದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಹಾಗೂ ಸರ್ಕಾರಿ ಜಮೀನನ್ನು ಮರಳಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ.33 ಆಕಾರ್‌ಬಂದ್ ಪ್ರಕಾರ 22.26 ಎಕರೆ ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಆದರೆ ಈ ಜಮೀನಿನಲ್ಲಿ ಬೇರೆ ಬೇರೆ ಜನರಿಗೆ ಮಂಜೂರಾಗಿದ್ದು, ಆದರೆ ಈ ಮಂಜೂರಾದ ಮೂಲ ಕಡತ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ಸರ್ವೆ ನಂ.33ರಲ್ಲಿ ತಾಲ್ಲೂಕು ಮೋಜಣಿದಾರರು ನೀಡಿರುವ ಸ್ಕೆಚ್‌ನಂತೆ ಲೋಕನಾಥ್ ಅವರು 39 ಗುಂಟೆ, ಕೃಷ್ಣಪ್ಪ $26^{1/2}$ ಗುಂಟೆ, ವೆಂಕಟೇಶಪ್ಪ ಮತ್ತು ವೆಂಕಟೇಶ್ ಜಂಟಿಯಾಗಿ 1.37 ಎಕರೆ ಜಮೀನನ್ನು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ಈ ಒತ್ತುವರಿದಾರರಿಗೆ ತಾಲ್ಲೂಕು ಕಚೇರಿಯಿಂದ ಎಲ್.ಎನ್.ಡಿ. ಸಿ.ಆರ್.53/2016–17 ದಿ.9.9.2016ರಂದು ಮೇಲ್ಕಂಡ ಒತ್ತುವರಿದಾರರಿಗೆ ನೋಟೀಸು ನೀಡಲಾಗಿರುತ್ತದೆ. ಆದರೆ ಅವರು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಒತ್ತುವರಿ ಜಾಗವನ್ನು ಗುರ್ತಿಸಿಕೊಡುವಂತೆ ಭೂಮಾಪಕರಿಗೆ ಉಪ ತಹಶೀಲ್ದಾರ್‌ರವರು ಸೂಚಿಸಿರುತ್ತಾರೆ. ಆದರೆ ಭೂಮಾಪಕರು ಈ ಒತ್ತುವರಿ ಜಾಗವನ್ನು ಗುರ್ತಿಸಿಕೊಡದ ಕಾರಣ ಅದನ್ನು ಖುಲ್ಲಾಪಡಿಸಲು ಸಾಧ್ಯವಾಗಿರುವುದಿಲ್ಲ. ಭೂಮಾಪಕರು ಒತ್ತುವರಿ ಜಾಗವನ್ನು ಗುರ್ತಿಸಿದ ತಕ್ಷಣವೇ ಒತ್ತುವರಿ ತೆರವುಗೊಳಿಸಲಾಗುವುದು. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿ ತಿಳಿಸಿರುವಂತೆ ಯಾವುದೇ ಜಮೀನು ಒತ್ತುವರಿಯಾಗಿರುವುದಿಲ್ಲ. ಸರ್ಕಾರಿ ಜಮೀನು ಸರ್ಕಾರದ ವಶದಲ್ಲಿದ್ದು, ಈ ಬಗ್ಗೆ

ಪಹಣಿಯನ್ನು ಲಗತ್ತಿಸಲಾಗಿದೆ. ದೂರುದಾರರು ಅನವಶ್ಯಕವಾಗಿ ತಮ್ಮ ಮೇಲೆ ತಪ್ಪು ಹೊರಿಸಿದ್ದು, ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

6. ಈ ಪ್ರಕರಣದಲ್ಲಿ ದೂರಿನಲ್ಲಿಯ ಆಪಾದನೆಗಳ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಪೋಲೀಸ್ ಉಪಾಧೀಕ್ಷಕರು, ಕಲೋ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಆದೇಶಿಸಿದ್ದು, ಅವರು ಪೂರ್ಣ ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಪೋಲೀಸ್ ಉಪಾಧೀಕ್ಷಕರ ವರದಿಯನ್ನು ಪರಿಶೀಲಿಸಿದಾಗ ಇರಿಗೇನಹಳ್ಳಿ ಗ್ರಾಮದ ಸರ್ವೆ ನಂ.33 ಒಟ್ಟು 22.26 ಎಕರೆ ಇದ್ದು, ಇದರಲ್ಲಿ ಮಂಜೂರಾದ ಜಮೀನು ಹಾಗೂ ಉಳಿಕೆ ಜಮೀನು ಈ ಕೆಳಗಿನಂತಿದೆ.

| ಕ್ರ. ಸಂ. | ಮೂಲ ಮಂಜೂರಿದಾರರ ಹೆಸರು/ ಹೊಸ ಸರ್ವೆ ನಂ. | ದುರಸ್ತಿ & ಪೋಡಿಯಂತೆ ವಿಸ್ತೀರ್ಣ (ಖರಾಬುಸೇರಿ) | ಮಂಜೂರಾದ ವರ್ಷ | ಷರಾ |
|---|---|---|---|---|
| 1 | ಶ್ರೀ ಕೆ.ಎನ್.ಮುನಿನಂಜೇಗೌಡ ಬಿನ್ ಕೊರಚಿ ನಾರಾಯಣಪ್ಪ ಸರ್ವೆ ನಂ.38 | 01–00 | 1969–70 | |
| 2 | ಹೆಚ್.ಮುನಿಶಾಮಪ್ಪ ಬಿನ್ ಮುನಿಯಪ್ಪ ಸರ್ವೆ ನಂ.39 | 02–00 | 1969–70 | 79ಎ&ಬಿ ರೀತ್ಯಾ ಪ್ರಕರಣ ದಾಖಲಾಗಿದೆ(ಸರ್ಕಾರಿ ದಾಖಲೆಯಲ್ಲಿದೆ) |
| 3 | ನಾರಾಯಣಪ್ಪ ಬಿನ್ ಮುನಿನಾಗಪ್ಪ ಸರ್ವೆ ನಂ.40 | 02–00 | 1969–70 | |
| 4 | ಮುನಿನಾಗಪ್ಪ ಬಿನ್ ಕೊನಪ್ಪನಹಳ್ಳಿ ಮುನಿನಾಗಪ್ಪ ಸರ್ವೆ ನಂ.41 | 02–00 | 1969–70 | |
| 5 | ಎನ್.ಎಂ.ಗಣೇಶ್ ದಾಸ್ ಬಿನ್ ಮುನಿಶಾಮಪ್ಪ ಸರ್ವೆ ನಂ.42 | 04–00 | 1966–67 | |
| 6 | ಜಿ.ಎಂ.ಪುಟ್ಟಣ್ಣ, ಬಿಇನ್ ಅಣ್ಣಯ್ಯಪ್ಪ ಸರ್ವೆ ನಂ.43 | 04–00 | 1966–67 | |
| 7 | **ಸರ್ಕಾರಿ ಜಮೀನು ಸರ್ವೆ ನಂ.44** | 00–39 | 1966–67 | **ಸರ್ಕಾರಿ ಜಮೀನು(ಎನ್.ಜಿ. ಲೋಕನಾಥ್‌ರವರು ಒತ್ತುವರಿ ಮಾಡಿರುತ್ತಾರೆ.** |
| 8 | ಬಿ.ಮುನಿರಾಮಯ್ಯ ಬಿನ್ ತಿಮ್ಮಯ್ಯ ಸರ್ವೆ ನಂ.45 | 02–05 | 1979–80 | |
| 9 | ಯರ್ರಪ್ಪ ಬಿನ್ ಕೈಯ್ಯಪ್ಪ ಸರ್ವೆ ನಂ.46 | 01–00 | 1979–80 | |
| | ಒಟ್ಟು ಜಮೀನು | 19–04 | | ಉಳಿಕೆ ಸರ್ಕಾರಿ ಜಮೀನು 03 ಎಕರೆ 22 ಗುಂಟೆ |

7. ಸರ್ವೆ ನಂ.33ರಲ್ಲಿ ದೂರುದಾರರ ಪ್ರಕಾರ 6.26 ಎಕರೆ ಜಮೀನು ಒತ್ತುವರಿಯಾಗಿದೆಯೆಂದು ಉಲ್ಲೇಖಿಸಿದ್ದು, ಆದರೆ ಪೋಲೀಸ್ ವರದಿಯಲ್ಲಿ ಜಮೀನು ಒತ್ತುವರಿ ವಿವರ ಈ ಕೆಳಗಿನಂತಿರುತ್ತದೆ.

| ಕ್ರ ಸಂ. | ಜಮೀನಿನ ವಿವರ | ಎಕರೆ–ಗುಂಟೆ |
|---|---|---|
| 1 | ಸರ್ವೆ ನಂ.33/ಪಿ1ರಲ್ಲಿನ ಜಮೀನು | 01–07 |
| 2 | ಉಳಿದ ಸರ್ಕಾರಿ ಜಮೀನು | 2–15 |
| | ಒಟ್ಟು | 3–22 |
| 4 | ಸರ್ವೆ ನಂ.39(79 ಎ&ಬಿ ಪ್ರಕರಣ)<br>ಸರ್ವೆ ನಂ.44(ಸರ್ಕಾರಿ ಲೆಕ್ಕದಲ್ಲಿರುವುದು) | 02–00<br>00–39 |
| 5 | ಸಾರ್ವಜನಿಕ ರಸ್ತೆ(ನಕ್ಷೆಯಲ್ಲಿರುವಂತೆ) | 00–05 |
| | ಪಹಣಿಯಂತೆ ಒಟ್ಟು ಜಮೀನು(ಸರ್ಕಾರಿ ಜಮೀನು(3+4+5) | 6–26 |

8. ಈ ಪ್ರಕರಣದಲ್ಲಿ ತನಿಖೆ ಕೈಗೊಂಡ ಮಾನ್ಯ ಪೋಲೀಸ್ ಉಪಾಧೀಕ್ಷಕರು ತಮ್ಮ ವಿಚಾರಣಾ ವರದಿಯಲ್ಲಿ ಸರ್ವೆ ನಂ.33 ಒಟ್ಟು ಕ್ಷೇತ್ರ 22.26 ಎಕೆ ಸರ್ಕಾರಿ ಗೋಮಾಳ ಜಮೀನಾಗಿದ್ದು, ಇದು 1960ರಿಂದ 1980ರವರೆಗೆ ಒಟ್ಟು 8 ರೈತರಿಗೆ ಮಂಜೂರಾಗಿ, ಪೋಡಿ ದುರಸ್ತಿಯಾಗಿ ಸರ್ವೆ ನಂ. 38ರಿಂದ 46 ಎಂಬುದಾಗಿ ನೀಡಿರುತ್ತಾರೆ. ಸರ್ವೆ ನಂ.34ರಲ್ಲಿ 39 ಗುಂಟೆ ಜಮೀನು ಸರ್ಕಾರಿ ಜಮೀನಾಗಿರುತ್ತದೆ. ಪಹಣಿಯ ಪ್ರಕಾರ 6.26 ಎಕರೆ ಜಮೀನಿನಲ್ಲಿ 4.21 ಎಕರೆ ಜಮೀನು ಸರ್ಕಾರಿ ಜಮೀನಾಗಿದ್ದು, ಅದನ್ನು ಮಂಜೂರಾದ ಜಮೀನುಗಳನ್ನು ಖರೀದಿಸಿದ ಹಾಲಿ ಅನುಭವದಲ್ಲಿರುವ ರೈತರು ಒತ್ತುವರಿ ಮಾಡಿಕೊಂಡಿರುತ್ತಾರೆ. ಆ ಪೈಕಿ ಸರ್ವೆ ನಂ.44ರ 39 ಗುಂಟೆ ಜಮೀನು ಲೋಕನಾಥ್ ಅವರು ಒತ್ತುವರಿ ಮಾಡಿದ್ದು, ಇವರು ಇರಿಗೇನಹಳ್ಳಿ, ಬಿಡಗಾನಹಳ್ಳಿಯಲ್ಲಿ ತಮ್ಮ ಜಮೀನು ಹೊಂದಿದ್ದು, ಅದರ ಪಕ್ಕದಲ್ಲಿರುವ ಈ ಸರ್ಕಾರಿ ಗೋಮಾಳ ಜಮೀನನ್ನು ತಮ್ಮ ಜಮೀನಿನೊಂದಿಗೆ ಸೇರಿಸಿಕೊಂಡು ನಿವೇಶನಗಳ ಬಡಾವಣೆಯನ್ನಾಗಿ ಅಭಿವೃದ್ಧಿಗೊಳಿಸಲು ಶ್ರೀಮತಿ ಪ್ರೇಮಲತಾ ಅವರೊಂದಿಗೆ ಜಂಟಿ ಅಭಿವೃದ್ಧಿ ಕರಾರು ಮಾಡಿಕೊಂಡು ದಿ.26.4.2016ರಂದು ದೇವನಹಳ್ಳಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿಸಿರುತ್ತಾರೆ. ಸದರಿ

ಜಮೀನುಗಳು ನಗರೀಕರಣ ಎಲ್ಲೆಯಿಂದ ಹೊರಗಿದ್ದು, ಸರ್ಕಾರದಿಂದ ಅನುಮೋದಿತ ಮಹಾ ಯೋಜನೆಯನ್ವಯ ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ.

9. ಈ ಜಮೀನಿನ ಒತ್ತುವರಿ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಾದ 1ರಿಂದ 4ನೇ ಎದುರುದಾರರು ನೇರವಾಗಿ ಬಾಗಿಯಾಗಿ ಸಹಕರಿಸದಿದ್ದರೂ ಕಾನೂನುರೀತ್ಯಾ ಕ್ರಮಕೈಗೊಂಡು ಸರ್ಕಾರಿ ಜಮೀನನ್ನು ರಕ್ಷಿಸುವಲ್ಲಿ ಹಾಗೂ ಒತ್ತುವರಿ ಜಮೀನನ್ನು ತೆರವುಗೊಳಿಸುವಲ್ಲಿ ನಿರ್ಲಕ್ಷ್ಯ ವಹಿಸಿರುವುದು ಕಂಡುಬಂದಿರುತ್ತದೆಂದು ಪೋಲೀಸ್ ವರದಿಯಲ್ಲಿ ಅಭಿಪ್ರಾಯಪಟ್ಟಿರುತ್ತಾರೆ.

10. ಈ ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಹಾಗೂ ಪೋಲೀಸ್ ವರದಿಯನ್ನು ಗಮನಿಸಿದಾಗ ಇರಿಗೇನಹಳ್ಳಿ ಗ್ರಾಮದ ಸರ್ವೆ ನಂ.33ರಲ್ಲಿ 4.22 ಎಕರೆ ಸರ್ಕಾರಿ ಗೋಮಾಳ ಜಮೀನನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿರುವುದು ಕಂಡುಬರುತ್ತದೆ. ಈ ಜಮೀನು ಒತ್ತುವರಿಯಾಗಿದೆಯೆಂದು 1ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿದ್ದಾರೆ. ಹಾಗೂ ಭೂಮಾಪಕರು ಜಮೀನನ್ನು ಮೋಜಣಿ ಮಾಡಿ ಗಡಿ ಗುರುತಿಸಿದ ನಂತರ ಸದರಿ ಒತ್ತುವರಿಯನ್ನು ತೆರವುಗೊಳಿಸಲಾಗುವುದೆಂದು ಆಕ್ಷೇಪಣೆಯಲ್ಲಿ ಉಲ್ಲೇಖಿಸಿರುತ್ತಾರೆ. ಆದರೆ ಇದಕ್ಕೆ ಯಾವುದೇ ಕಾಲಮಿತಿ ತಿಳಿಸಿರುವುದಿಲ್ಲ. ಸದರಿ ಒತ್ತುವರಿಯನ್ನು ತೆರವುಗೊಳಿಸಬೇಕೆಂದು ಖಾಸಗಿ ವ್ಯಕ್ತಿಯು ದೂರು ನೀಡಿದಾಗಲೂ ಸಹ ಈ ಒತ್ತುವರಿಯನ್ನು ತೆರವುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯುವಲ್ಲಿ ನಿರ್ಲಕ್ಷ್ಯವಹಿಸಿ, ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸದೆ ಇನ್ನೊಬ್ಬರ ಮೇಲೆ ಆಪಾದಿಸುತ್ತಾ, ತಮ್ಮ ಸರ್ಕಾರಿ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆಂದು ಕಂಡುಬರುತ್ತದೆ.

11. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ದೇವನಹಳ್ಳಿ ತಾಲ್ಲೂಕು ಇರಿಗೇನಹಳ್ಳಿ ಗ್ರಾಮದ ಸರ್ವೆ ನಂ.33ರಲ್ಲಿ ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆದುಕೊಳ್ಳುವುದು ಹಾಗೂ ಇರಿಗೇನಹಳ್ಳಿಯ ಶ್ರೀ ಲೋಕ್‌ನಾಥ್‌ರವರು ಸರ್ಕಾರಿ**

**ಗೋಮಾಳ ಜಮೀನನ್ನು ತಮ್ಮ ಜಮೀನಿನೊಂದಿಗೆ ಸೇರಿಸಿ ಅಕ್ರಮವಾಗಿ ಜಂಟಿ ಕರಾರು ಮಾಡಿಕೊಂಡು, ಸರ್ಕಾರಿ ಜಮೀನನ್ನು ಕಬಳಿಸಲು ಪ್ರಯತ್ನಿಸಿರುವುದರಿಂದ, ಇವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**